ಪಶು ಆಸ್ಪತ್ರೆಗಳಲ್ಲಿ ಔಷಧಿ ಹಾಗೂ ಸಿಬ್ಬಂದಿಗಳ ಕೊರತೆ

35 (139); ಶ್ರೀ ಡಾ॥ ಶಿವರಾಜ್ ಪಾಟೀಲ್ ಎಸ್. (ರಾಯಚೂರು ನಗರ)

ಅ) ರಾಯಚೂರು ಜಿಲ್ಲೆಯ ವ್ಯಾಪ್ತಿಯಲ್ಲಿರುವ ಪಶು ಆಸ್ಪತ್ರೆಗಳ ಸಂಖ್ಯೆ ಎಷ್ಟು ಮತ್ತು ಅವುಗಳಾವವು (ವಿವರ ನೀಡುವುದು);

ಆ) ಈ ಆಸ್ಪತ್ರೆಗಳಿಗೆ ಸ್ವಂತ ಕಟ್ಟಡಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಈ ಆಸ್ಪತ್ರೆಗಳಲ್ಲಿ ಸಿಬ್ಬಂದಿ ಮತ್ತು ಔಷಧಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಅಗತ್ಯ ಸಿಬ್ಬಂದಿಗಳನ್ನು ನೇಮಿಸಲು ಮತ್ತು ಔಷಧಿಗಳನ್ನು ಸಕಾಲದಲ್ಲಿ ಪೂರೈಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು)

ಅ) ರಾಯಚೂರು ಜಿಲ್ಲೆಯಲ್ಲಿ ಒಟ್ಟು 106 ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು ಅವುಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಸ್ವಂತ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಇ) ಶಿಥಿಲಗೊಂಡ ಕಟ್ಟಡಗಳ ಬದಲಿಗೆ ಆರ್.ಐ.ಡಿ.ಎಫ್. ಯೋಜನೆಯಡಿ ಅನುದಾನದ ಲಭ್ಯತೆ ಮೇರೆಗೆ ನೂತನ ಕಟ್ಟಡಗಳನ್ನು ನಿರ್ಮಿಸಲು ಹಂತ ಹಂತವಾಗಿ ಕ್ರಮವಹಿಸಲಾಗುವುದು.

ಈ) ಬಂದಿದೆ.

ಉ) ಖಾಲಿ ಇರುವ ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಹಂತಹಂತವಾಗಿ ಭರ್ತಿ ಮಾಡಲು ಕ್ರಮವಹಿಸಲಾಗುವುದು.

ಪಶುವೈದ್ಯಾಧಿಕಾರಿಗಳ 350 ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳಡಿ ಭರ್ತಿ ಮಾಡಲು ಪ್ರಕ್ರಿಯೆ ಪ್ರಗತಿಯಲ್ಲಿದೆ.

ಇತರೆ ವೃಂದಗಳಾದ ಜಾನುವಾರು ಅಧಿಕಾರಿ, ಹಿರಿಯ ಪಶುವೈದ್ಯಕೀಯ ಪರೀಕ್ಷಕರು, ಪಶುವೈದ್ಯಕೀಯ ಪರೀಕ್ಷಕರು, ಅಧೀಕ್ಷಕರ ಹುದ್ದೆಗಳನ್ನು ಮುಂಬಡ್ತಿ ನೀಡುವ ಸಂದರ್ಭದಲ್ಲಿ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುವುದು.

ಪಶುವೈದ್ಯಕೀಯ ಸಹಾಯಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ವಾಹನ ಚಾಲಕರು, ಬೆರಳಚ್ಚುಗಾರರು, ಡಿ–ದರ್ಜೆ ಹುದ್ದೆಗಳನ್ನು ನೇರ ನೇಮಕಾತಿ ಮತ್ತು ಮುಂಬಡ್ತಿ ಮೂಲಕ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುವುದು. ಪ್ರಸ್ತುತ ಸಾಲಿನಲ್ಲಿ ಔಷಧಗಳ ಸರಬರಾಜಿಗಾಗಿ ₹. 32 ಕೋಟಿ ಅನುದಾನ ನಿಗದಿಪಡಿಸಲಾಗಿರುತ್ತದೆ. ನಿಗದಿಪಡಿಸಿರುವ ಅನುದಾನದಲ್ಲಿ ರಾಜ್ಯದ ಪಶುವೈದ್ಯ ಸಂಸ್ಥೆಗಳಿಗೆ ₹. 15 ಕೋಟಿ ಅನುದಾನದಲ್ಲಿ ಜಿಲ್ಲೆಗಳಿಗೆ ಸರಬರಾಜು ಮಾಡಲಾಗಿದೆ ಉಳಿದ ಅನುದಾನದಲ್ಲಿ ಔಷಧಗಳನ್ನು ಸರಬರಾಜು ಮಾಡಲಾಗುವುದು.

ಅನುಬಂಧ

VETERINARY INSTITUTIONS OF RAICHUR DISTRICT (AFTER RE-ORGANISATION) 2014-15

Sl. No	Taluk	Veterinary Hospital& Other Hospitals	Hobli Hospitals	Veterinary Dipsensary	Primary Veterinary Dipsensary	A.I. Centre	Mobile Veterinary Dispsensary	Poultry Extension Centre	Total
1	Raichur	Raichur	kalmala	Gunjahalli	Edapanur	-	Raichur	Raichur	23
			Devasugur	Yapaladinni	L.K.Doddi				
			Yaragera	Baidoddi	kadlur				
			Gillisugur	Jegarakal	D.Rampur				
				Matamari	Bijjanagera				
				Elebichali	Marchathal				
				Yaklaspura	Chandrabanda				
					Shakhavadi				
					Talamari				
2	Manvi	Manvi	Kallur	Rajalabanda	Toranadinni	Neer Manvi	Manvi		21
		Baygavat	Paman kallur	Bagalvad	Halapur	Hirekotnekal			
		Sirvar	Kavital	Cheekalparvi	Kurukunda				
		Kurdi		Pothanal	Chincharaki				
				Machanur	Attanur				
				Ballatagi					
3	Sindhanur	Sindhanur	Balaganur	Hanchinahal camp	Gududur	Mukunda	Sindhanur		26
			Salagunda	Dadesugur	Siddarampur	Thidigola			
			Jalihal camp	Ragalparvi	Kurukunda	Bommanala			
			Turvihal	Albanur	Mad Sirvar	Virupapura			
			Javalagera	R H. No.1 Camp		Amarapur			
			Badarli	Pagadadinni camp		Gunda			
				Kolabal					
				Sasalamari camp					

Sl. No	Talluk	Veterinary Hospital	Hobli Hospitals	Veterinary Dipsensary	Primary Veterinary Dipsensary	A.I. Centre	Mobile Veterinary Dispsensary	Poultry Extension Centre	Total
4	Lingasugur	Lingasugur	Gurugunta	Mavinabavi	Amadhihal	Makapura	Lingasugur	-	23
		Maski	Mudugal	Nagarhal					
			Gorebal	Gejjalagatta					
				Nagalapura					
				Medakinahal					
				Mattur					
				Guntagola					
				Ichanal					
				Santhekallur					
				Anvari					
				Yaradona					
				Ashihal tanda					
				Kasaba Lingasugur					
				Bayyapur					
				Ane Hosur					
5	Devadurga	Devadurga	Gabbur	Galag	-		Devadurga	-	11
			Jalahalli	Hirebudur					
			Arakera	Masarkal					
				Nagadadinni					
				Kyadigera					
				Ganadal					
				Jagir Jadaldinni					
				Alkod					
Total		9	19	44	19	9	5	1	106